**CC 1837/2022**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿಸಿ ನಂಬರ್** 1837/2022

**ಸಿ ಡಬ್ಲೂ** 4

**ಪಿ ಡಬ್ಲೂಃ** 5

| | |
|---|---|
| **ಸಾಕ್ಷಿಯ ಹೆಸರು -** | **ಸಣ್ಣ ಗಾಳೆಪ್ಪ** |
| **ತಂದೆಯ ಹೆಸರು -** | **ಹನುಮಂತಪ್ಪ** |
| **ವಯಸ್ಸು -** | 40 **ವರ್ಷಗಳು** |
| **ಉದ್ಯೋಗ -** | **ಪೋಲಿಸ್ ಪೇದೆ, ಗ್ರಾಮೀಣ ಪೋಲಿಸ್ ಠಾಣೆ** |
| **ವಾಸಸ್ಥಳ -** | **ಹೊಸಪೇಟೆ** |

**ಸಾಕ್ಷಿಯನ್ನು ದಿನಾಂಕಃ** 20-11-2025 **ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ. ಪಿ. ಪಿ. ಅವರಿಂದ**

ನಾನು **05-05-2015** ರಿಂದ **06-07-2023** ರವರೆಗೆ ಹೊಸಪೇಟೆ ಪಟ್ಟಣ ಪೋಲಿಸ್ ಠಾಣೆಯಲ್ಲಿ ಪೋಲಿಸ್ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ **02-06-2022** ರಂದು ಆರಕ್ಷಕ ನೀರಿಕ್ಷಕರು ಚಾಸಾ-**1** ರವರಿಗೆ ಮತ್ತು ನನಗೆ ಗುಡ್ ಮಾರ್ನಿಂಗ್ ಬೀಟ್ ಕರ್ತವ್ಯಕ್ಕೆ ನಿಯೋಜಿಸಿದ್ದರು. ಬೆಳಿಗ್ಗೆ **6.30** ಗಂಟೆಗೆ ನಾನು ಮತ್ತು ಚಾಸಾ-**1** ರವರು ಪಟೇಲ್ ನಗರ, ರಾಣಿಪೇಟೆ, ಹಂಪಿರಸ್ತೆಯ ತಿಯೋಸಾಫಿಕಲ್ ಕಾಲೇಜ್ ಹತ್ತಿರ ಗಸ್ತು ಮಾಡುತ್ತಿದ್ದಾಗ ಚಾಸಾ-**1** ರವರಿಗೆ ಮೀರ್ ಅಲಂ ಟಾಕೀಸ್ ಹತ್ತಿರ ಚೋಳ ವೈನ್ಸ್ ಮುಂಭಾಗದಲ್ಲಿ ಒಬ್ಬ ವ್ಯಕ್ತಿ ಬಿಳಿ ಪ್ಲಾಸ್ಟಿಕ್ ಚೀಲದಲ್ಲಿ ಮಧ್ಯವನ್ನು ಇಟ್ಟುಕೊಂಡು ಅಕ್ರಮವಾಗಿ ಜನರಿಗೆ ಮಾಡುತ್ತಿದ್ದಾನೆ ಎಂದು ಮಾಹಿತಿ ಬಂದಿತು. ಸದರಿ ವಿಚಾರವನ್ನು ಚಾಸಾ **-1** ರವರು ಆರಕ್ಷರ ನೀರಿಕ್ಷಕರಿಗೆ ತಿಳಿಸಿರುತ್ತಾರೆ. ಆರಕ್ಷರ ನೀರಿಕ್ಷಕರು ನಮಗೆ ಸ್ಥಳಕ್ಕೆ ಹೋಗಿ ಮಾಹಿತಿಯನ್ನು ಖಚಿತಪಡಿಕೊಳ್ಳಿ ಎಂದು ತಿಳಿಸಿದ್ದರು.

ಬೆಳಿಗ್ಗೆ 6.40 ಗಂಟೆಗೆ ನಾನು ಮತ್ತು ಚಾಸಾ-1 ರವರು ಮಾಹಿತಿ ಬಂದಿದ್ದ ಸ್ಥಳದಿಂದ ಸ್ವಲ್ಪ ದೂರದಲ್ಲಿ ನಿಂತು ನೊಡಿದಾಗ ಒಬ್ಬ ವ್ಯಕ್ತಿ ಪ್ಲಾಸ್ಟಿಕ್ ಚೀಲದಲ್ಲಿ ಮಧ್ಯದ ಪ್ಯಾಕೆಟ್ ಗಳನ್ನು ಇಟ್ಟುಕೊಂಡು ಸಾರ್ವಜನಿಕರಿಗೆ ಮಾರಾಟ ಮಾಡುತ್ತಿರುವುದು ಕಂಡುಬಂದಿತು. ಚಾಸಾ-1 ರವರು ನನ್ನನ್ನು ಸ್ಥಳದಲ್ಲಿಯೇ ಬಿಟ್ಟು ಠಾಣೆಗೆ ದೂರು ನೀಡಲು ಹೋದರು. ಬೆಳಿಗ್ಗೆ 8.10 ಗಂಟೆಗೆ ಚಾಸಾ -1 ರವರು ಚಾಸಾ -5, 6 ಮತ್ತು 10 ರವರನ್ನು ಮತ್ತು ಇಬ್ಬರು ಪಂಚರನ್ನು ನಾನು ಇದ್ದ ಸ್ಥಳಕ್ಕೆ ಕರೆದುಕೊಂಡು ಬಂದರು. ಬೆಳಿಗ್ಗೆ 8.20 ಗಂಟೆಗೆ ದಾಳಿ ಮಾಡಿದಾಗ ಮಧ್ಯ ಖರೀದಿಸಲು ಬಂದಿದ್ದ ಜನರು ಒಡಿ ಹೋದರು. ಅಲ್ಲಿದ್ದ ಆರೋಪಿಯನ್ನು ಹಿಡಿದು ವಿಚಾರಿಸಿದಾಗ ಹುಲುಗಪ್ಪ ತಂದೆ ಸಣ್ಣಕ್ಕೆಪ್ಪ ತಳವಾರ, ಸಾಃ ತಳವಾರಕೆರಿ, ಹೊಸಪೇಟೆ ಎಂದು ತಿಳಿಸಿದ. ಆರೋಪಿಯ ಬಳಿ ಇದ್ದ ಚೀಲದಲ್ಲಿ 90 ಎಂಎಲ್ ನ 96 ಹೈವರ್ಡ್ ವಿಸ್ಕಿ ಟೆಟ್ರಾ ಪ್ಯಾಕ್ ಗಳು ಮತ್ತು 90 ಎಂಎಲ್ ನ 36 ಹೈವರ್ಡ್ ವಿಸ್ಕಿ ಟೆಟ್ರಾ ಪ್ಯಾಕ್ ಗಳು, 180 ಎಂಎಲ್ ನ 2 ಬ್ಯಾಗ್ ಪೈಪರ್ ಟೆಟ್ರಾ ಪ್ಯಾಕ ಗಳು, 180 ಎಂಎಲ್ ನ 2 ಒಲ್ಡ ಟವರಿನ ಟೆಟ್ರಾ ಪ್ಯಾಕ್ ಗಳು ದೊರೆತವು. ಚಾಸಾ -10 ರವರು ನನಗೆ ಅಂಗ ಶೋಧನೆ ಮಾಡಲು ಹೇಳಿದ್ದರಿಂದ ಪಂಚರ ಸುವಕ್ಷಮ ಆರೋಪಿಯ ಅಂದಗಶೋಧನೆ ಮಾಡಿದಾಗ ರೂ. 1,200/- ಗಳು ದೊರೆತವು. ಸದರಿ ಹಣ ಮಧ್ಯ ಮಾರಾಟ ಮಾಡಿದಾಗ ಬಂದ ಹಣ ಎಂದು ಆರೋಪಿ ತಿಳಿಸಿದ. ಮುದ್ದೆ ಮಾಲುಗಳನ್ನು ಪಂಚರ ಸಮಕ್ಷಮ ಜಪ್ತು ಪಡಿಸಿಕೊಂಡಿರುತ್ತಾರೆ. ಸದರಿ ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿ ಪಂಚನಾಮೆ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿಃ 2 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿಃ 2(ಎಫ್) ಎಂದು ಗುರುತಿಸಲಾಯಿತು. ಸಾಕ್ಷಿ ಮುದ್ದೆ ಮಾಲು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮು.ಮಾ -1 ರಿಂದ 3 ಎಂದು ಗುರುತಿಸಲಾಗಿದೆ. ಸಾಕ್ಷಿ ನಿಪಿಃ 3 ರ

ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ನಾನು ತನಿಖಾಧಿಕಾರಿಯ ಮುಂದೆ ಹೇಳಿಕೆ ನೀಡಿರುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎನ್ ಎಸ್ ಎಚ್ ವಕೀಲರಿಂದ**

ನಾವು ಗುಡ್ ಮಾರ್ನಿಂಗ್ ಬೀಟ್ ಕರ್ತವ್ಯ ಮಾಡಲು ಬೆಳಿಗೆಗ 5.00 ಗಂಟೆಗೆ ಠಾಣೆ ಬಿಟ್ಟಿರುತ್ತೇವೆ. ಸದರಿ ಕರ್ತವ್ಯಕ್ಕೆ ನಾವು ಇಬ್ಬರು ಪೋಲಿಸರು ಹೋಗಿದ್ದೆವು. ನಮ್ಮ ಸ್ವಂತ ವಾಹನದಲ್ಲಿ ಹೋಗಿದ್ದೇವು. ನನ್ನ ಹೇಳಿಕೆಯಲ್ಲಿ ಸ್ವಂತ ವಾಹನದಲ್ಲಿ ಹೋಗಿದ್ದೇವು ಎಂದು ಬರೆಸಿಲ್ಲ. ಗುನ್ನಾ ಸ್ಥಳಕ್ಕೆ ಬೆಳಿಗ್ಗೆ 6.40 ಗಂಟೆಗೆ ಹೋಗಿದ್ದೆ. ಮೀರ್ ಅಲಂ ಟಾಕೀಸು ಹತ್ತಿರ ಸಾಕಷ್ಟು ಜನ ತಿರುಗಾಡುತ್ತಾರೆ ಅಂದರೆ ಸರಿ . ಸದರಿ ಟಾಕೀಸ್ ಬಳಿ ಅಂಗಡಿಗಳು ಮತ್ತು ಹೋಟೆಲ್ ಇರುತ್ತವೆ ಅಂದರೆ ಸರಿ . ಮಧ್ಯ ಮಾರಾಟ ಆಗುತ್ತಿದ್ದ ಸ್ಥಳದಲ್ಲಿ ಬಹಳ ಜನ ಇದ್ದರು. ಸದರಿ ಜನರ ಹೇಳಿಕೆಯನ್ನು ಪಡೆದಿಲ್ಲ. ಸಾಕ್ಷಿ ಮುಂದುವರೆದು ಅವರು ಸಿಕ್ಕಿರಲಿಲ್ಲ ಎಂದು ನುಡಿಯುತ್ತಾರೆ. ಮಧ್ಯ ಮಾರಾಟ ಆಗುತ್ತಿದ್ದ ಸ್ಥಳದ ಚೆಕ್ ಬಂದಿ ನನಗೆ ಗೊತ್ತಿಲ್ಲ.

ಪಂಚರನ್ನು ಠಾಣೆಯಿಂದಲೇ ಕರೆದುಕೊಂಡು ಬಂದಿದ್ದರು. ಅವರಿಗೆ ನೋಟಿಸ್ ಕೊಡಲಾಗಿತ್ತೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಪಂಚನಾಮೆಯನ್ನು ಠಾಣೆಯ ಕಂಪ್ಯೂಟರ್ ನಲ್ಲಿ ಟೈಪ್ ಮಾಡಿರುತ್ತಾರೆ. ಅದು ಯಾವ ಕಂಪನಿಯದ್ದು ಎಂದು ನನಗೆ ಗೊತ್ತಿಲ್ಲ. ಟೆಟ್ರಾ ಪ್ಯಾಕ್ ಗಳ ಮೇಲೆ ಇದ್ದ ಬ್ಯಾಚ್ ನಂಬರ್ ಹೇಳಿಕೆಯಲ್ಲಿ ಬರೆಸಿರುವುದಿಲ್ಲ. ನನ್ನ ಹೇಳಿಕೆಯಲ್ಲಿ ಆರೋಪಿಯ ಉಡುಪಗಳ ಯಾವ ಜೇಬಿನಿಂದ ಹಣವನ್ನು ಜಪ್ತಿ ಮಾಡಿಕೊಂಡೆವು ಎಂದು ಬರೆಸಿರುವುದಿಲ್ಲ. ನಿಪಿಃ 3 ರ ಫೋಟೊಗಳನ್ನು

ಮೊಬೈಲ್ ನಲ್ಲಿ ತೆಗೆಯಲಾಗಿದೆ. ಅದು ಯಾರ ಮೊಬೈಲ್ ಮತ್ತು ಯಾವ ಕಂಪಿನಿಯದ್ದು ಎಂದು ನನಗೆ ಗೊತ್ತಿಲ್ಲ. ನಾವು ಗುನ್ನೆ ಸ್ಥಳಕ್ಕೆ ಹೋಗಿಲ್ಲ, ಸ್ಥಳದಲ್ಲಿ ಆರೋಪಿ ಇರಲಿಲ್ಲ, ಆರೋಪಿಯ ತಾಬಾದಲ್ಲಿ ಮದ್ಯದ ಪ್ಯಾಕೆಟ್ ಗಳು ಇರಲಿಲ್ಲ, ಸ್ಥಳದಲ್ಲಿ ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ಜಪ್ತು ಪಡಿಸಿಕೊಂಡಿಲ್ಲ ಅಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ,

**ಮರು ವಿಚಾರಣೆ- ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.